**<u>ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.</u>**

**SC No**.227/2022

**PW**. 6

**CW**. 7

**ಸಾಕ್ಷಿಯ ಹೆಸರು –ವಾಣಿ ಸಿ ಆರ್**

**ಗಂಡನ ಹೆಸರು –ವೆಂಕಟೇಶ**

**ವಯಸ್ಸು –40 ವರ್ಷಗಳು** ದಿನಾಂಕ 21–06–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಗೃಹಿಣಿ**

**ವಾಸಸ್ಥಳ –ಬೆಟ್ಟದಪುರ , ಪಿರಿಯಾಪಟ್ಟಣ ತಾಲ್ಲೂಕು**

**<u>ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–</u>**

ಚಾಸಾ–1 ರಿಂದ 6 ರವರು ಗೊತ್ತು. ಆರೋಪಿ ನನಗೆ ಗೊತ್ತು . ಆರೋಪಿಯೊಂದಿಗೆ ಚಾಸಾ 2 ರವರ ಮದುವೆ ನಿಶ್ಚಯವಾಗಿದ್ದು ನನಗೆ ಗೊತ್ತಿಲ್ಲ. ಅವರ ಇಬ್ಬರ ಮದುವೆ ಕಾರ್ಯಕ್ರಮಕ್ಕೆ ಆಹ್ವಾನ ಇರಲಿಲ್ಲ. ಈಗ್ಗೆ ಸುಮಾರು 4 ವರ್ಷಗಳ ಹಿಂದೆ ರಾತ್ರಿ ಸುಮಾರು 7.30 ರಿಂದ 8 ಗಂಟೆಯ ಸಮಯದಲ್ಲಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ಕೃಷಿ ಇಲಾಖೆಯ ಕಟ್ಟಡದ ಬಳಿ ನಾಯಿ ಬೊಗಳುವ ಶಬ್ಧ ಕೇಳಿ ನಾನು ಆ ಸ್ಥಳಕ್ಕೆ ಹೋದೆ. ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ರಸ್ತೆಯಲ್ಲಿ ಚಾಸಾ 2 ರವರು ಗಾಯಗೊಂಡು ಸ್ಥಳದಲ್ಲೇ ಬಿದ್ದಿದ್ದ. ಬೇರೆ ಯಾವ ವಸ್ತುಗಳು ಬಿದ್ದಿದ್ದವು ಎಂಬುದನ್ನು ನಾನು ನೋಡಲಿಲ್ಲ. ಆತನಿಗೆ ಸೇರಿದ ಮೋಟರ್ ಸೈಕಲ್ ಅಲ್ಲಿ ಬಿದ್ದಿತ್ತು. ನಾನು ಕೂಗಿಕೊಂಡೇ ಕೆಲವು ಜನ ಸ್ಥಳಕ್ಕೆ ಬಂದರು, ಆದರೆ ಯಾರು ಯಾರು ಬಂದರು ಎಂದು ನಾನು ನೋಡಿಲ್ಲ. ನಂತರ ಸ್ಥಳದಲ್ಲಿ ಸೇರಿದ್ದವರು ಆ್ಯಂಬುಲೆನ್ಸ್ ಗೆ ಕರೆ ಮಾಡಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನಾನು ಆಸ್ಪತ್ರೆಗೆ ಹೋಗಿರಲಿಲ್ಲ. ನಾನು ಚಾಸಾ 2 ರವರಿಗೆ ಸೇರಿದ ಬೇರೆ

ಯಾವುದೇ ವಸ್ತುಗಳನ್ನು ನಾನು ನೋಡಲಿಲ್ಲ. ಚಾಸಾ 2 ರವರಿಗೆ ಯಾರು ಹಲ್ಲೆ ಮಾಡಿದ್ದಾರೆ ಎಂದು ನನಗೆ ತಿಳಿಯಲಿಲ್ಲ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ಸ್ಥಳದಲ್ಲಿ ಬಿದ್ದಿದ್ದ ಚಾಸಾ 2 ರವರನ್ನು ನೋಡಿದಾಗ ಎಲ್ಲಿ ರಕ್ತಗಾಯವಾಗಿತ್ತು, ಯಾವ ಭಾಗದಲ್ಲಿ ರಕ್ತಗಾಯವಾಗಿತ್ತು ಎಂದು ನಾನು ನೋಡಲಿಲ್ಲ. ಚಾಸಾ 8, ಆರೋಪಿಯ ಸೋದರ ಮಾವನಾಗಿದ್ದು, ಆತನು ನಮ್ಮ ಊರಿನವನು ಎಂದರೆ ಸರಿ. ಕೃಷಿ ಇಲಾಖೆ ಕಛೇರಿ ಕಟ್ಟಡದ ವಿದ್ಯುತ್ ಸಂಪರ್ಕ ಮತ್ತು ಬೀದಿ ದೀಪದ ಸಂಪರ್ಕ್ ಸ್ಥಳದಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ಸಹ ಆ ದಿನ ಚಾಸಾ 2 ರವರನ್ನು ಆಸ್ಪತ್ರೆಗೆ ದಾಖಲಿಸಲು ಹೋಗಿದ್ದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ 2 ರವರಿಗೆ ಸೇರಿದ ಜರ್ಕಿನ್ ಸಹ ಬಿದ್ದಿತ್ತು ಎಂದರೆ ಸರಿಯಲ್ಲ. ಮು.ಮಾ. 4 ಮತ್ತು 5 ಗಳನ್ನು ಹಾಗೂ ನಿ.ಪಿ. 4 ರಲ್ಲಿ ಕಂಡ ಮೋಟರ ಸೈಕಲ್ ಅನ್ನು ನಾನು ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಅವುಗಳೇ ಈ ದಿನ ನ್ಯಾಯಾಲಯದ ಮುಂದಿರುವ ವಸ್ತುಗಳು ಎಂದರೆ ಮೂ. ಮಾ 4, 5 ಹಾಗೂ ನಿ.ಪಿ. 4 ಛಾಯಾಚಿತ್ರಗಳಾಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ಸ್ಥಳದಲ್ಲಿ ಪ್ರಜ್ಞೆ ಇರಲಿಲ್ಲ. ಚಾಸಾ 2 ರವರನ್ನು ಆರೋಪಿ ವಿವಾಹವಾಗಲು ಇಷ್ಟವಿಲ್ಲದ ಕಾರಣ ಆ ದಿನ ಚಾಸಾ 2 ರವರನ್ನು ಆ ಸ್ಥಳಕ್ಕೆ ಕರೆಯಿಸಿ ಆರೋಪಿ ಚಾಸಾ 2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಹೊಟ್ಟೆಯ ಮತ್ತು ಪಕ್ಕೆಯ ಭಾಗಕ್ಕೆ ಹಲ್ಲೆ

ಮಾಡಿದ್ದಾಳೆಂದು ತಿಳಿದುಬಂತು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾಳೆ ಎಂದು ಚಾಸಾ 2 ನನಗೆ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 14 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಸಂಬಂಧಿಯಾದ ಕಾರಣ ಅವರ ವಿವಾಹ ನಿಶ್ಚಯ ಮತ್ತು ಚಾಸಾ 2 ರವರೊಂದಿಗೆ ವಿವಾಹ ನಿಗದಿಯಾಗಿದ್ದ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.